## ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ನ್ಯಾಯಾಲಯ, ಶಿಗ್ಗಾಂವ.

**ಫೌಜದಾರಿ ಪ್ರಕರಣ ಸಂಖ್ಯೆ: 1/2024**

**ದೂರುದಾರರು** ಶ್ರೀಮತಿ ರೇಣುಕಾ ಕೋಂ ಹನುಮಂತಪ್ಪ ಕಬ್ಬೇರ,
ಸಾಃ ಹನುಮರಹಳ್ಳಿ, ತಾಃ ಶಿಗ್ಗಾಂವ, ಜಿಃ ಹಾವೇರಿ.

**ವಿರುದ್ಧ**

**ಆರೋಪಿಃ** ಶ್ರೀ ಮಂಜುನಾಥ ತಂದೆ ದುರಗಪ್ಪ ಬಂಡಿವಡ್ಡರ,
ಸಾಃ ಕಾಮನಹಳ್ಳಿ, ತಾಃ ಶಿಗ್ಗಾಂವ, ಜಿಃ ಹಾವೇರಿ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅನ್ವಯ ಆರೋಪಿಯ ಹೇಳಿಕೆ**

ಪ್ರಶ್ನೆ 1) ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳನ್ನು ಮನಪೂರ್ವಕವಾಗಿ ಕೇಳಿದ್ದಿರಾ ?
ಉಃ ಕೇಳಿದ್ದೇನೆ

ಪ್ರಶ್ನೆ 2) ಚಾಸಾ.1/ಪ್ರಾಸಾ.1 ಶ್ರೀಮತಿ ರೇಣುಕಾ ಕೋಂ ಹನುಮಂತಪ್ಪ ಕಬ್ಬೇರ, ತಮ್ಮ ಸಾಕ್ಷ್ಯದಲ್ಲಿ ಆರೋಪಿತನಾದ ನೀನು ದಿನಾಂಕ 10.07.2022 ರಂದು ಪಿರ್ಯಾದಾರರ ಕಡೆಯಿಂದ ರೂ.7,82,000/- ಗಳನ್ನು ನಿನ್ನ ಮನೆಯ ಅಡಚಣೆಯ ಸಲುವಾಗಿ ಕೈಗಡ ಸಾಲ ತೆಗೆದುಕೊಂಡಿದ್ದು ಅದನ್ನು 6 ತಿಂಗಳ ಒಳಗಾಗಿ ಮರಳಿ ಕೊಡುವುದಾಗಿ ಪಿರ್ಯಾದಿದಾರರಿಗೆ ಆಶ್ವಾಸನೆ ಕೊಟ್ಟಿದ್ದು ಇದ್ದು, ನಂತರ ದಿಃ 14.08.2023 ರಂದು ಪಿರ್ಯಾದಿದಾರರು ಹಣ ಕೇಳಿದಾಗ ಆರೋಪಿತನಾದ ನೀನು ನಿನ್ನ ಎಸ್ ಬಿ ಐ ಬ್ಯಾಂಕ್ ಶಾಖೆ ಸತ್ತೂರ ಧಾರವಾಡ ಇದರ ಚೆಕ್ ನಂ.354632 ನೇದ್ದರಲ್ಲಿ ಚೆಕ್ ಮೊತ್ತ ರೂ.7,82,000/- ನಮೂದಿಸಿ ಚೆಕ್ಕನ್ನು ನೀಡಿದ್ದು ಅದನ್ನು ನಗದೀಕರಣಕ್ಕಾಗಿ ಸಲ್ಲಿಸಿದಾಗ ಸಾಕಷ್ಟು ಹಣ ಇರುವುದಿಲ್ಲ (Insufficient Funds) ಅಂತಾ ಹೇಳಿ ಸದರ ಬ್ಯಾಂಕಿನವರು ಪಿರ್ಯಾದಿಗೆ ಚೆಕ್ಕನ್ನು ದಿಃ 05.09.2023 ರಂದು ಮೆಮೋದೊಂದಿಗೆ ಮರಳಿ ನೀಡಿದ್ದು, ಪಿರ್ಯಾದಿಯು ತನ್ನ ವಕೀಲರ ಮುಖಾಂತರ ನಿಮಗೆ ನೋಟಿಸು ನೀಡಿದ್ದರೂ ಕೂಡ ಚೆಕ್ ಹಣವನ್ನು ನೀವು ಇಂದಿನವರಗೂ ಮರಳಿ ಕೊಟ್ಟಿರುವುದಿಲ್ಲಾ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?

ಉಃ

ಪ್ರಶ್ನೆ 3) ನೀನು ಇನ್ನೇನಾದರೂ ಹೆಚ್ಚಿಗೆ ಹೇಳುವುದು ಇದೆಯೇ ?

ಉಃ ನಾನು ಚೆಕ್ಕು ಕೊಟ್ಟಿರುತ್ತೇನೆ. ದೂರುದಾರರಿಂದ ಹಣ ಪಡೆದಿರುತ್ತೇನೆ ಆದರೆ ಹತ್ತಿ ಪಡೆದಿರುವುದಿಲ್ಲ.

ಪ್ರಶ್ನೆ 4) ನಿನ್ನ ಪರವಾಗಿ ಯಾವುದಾದರೂ ಸಾಕ್ಷಿಗಳನ್ನು ಮಾಡಿಸುತ್ತೀಯಾ?

ಉಃ ಹೌದು ಮಾಡಿಸುತ್ತೇನೆ. ಈ ದಿವಸ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ.

(ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ, ಆತನಿಗೆ ಗೊತ್ತಿದ್ದ ಭಾಷೆಯಲ್ಲಿ ಅಭಿಯೋಜಕರ ಪರ ವಿಚಾರಣೆಯಾದ ಸಾಕ್ಷಿಗಳ ಹೇಳಿಕೆಗಳನ್ನು ಓದಿ ಹೇಳಿ ಆತನ ಹೇಳಿಕೆಯನ್ನು ಪಡೆಯಲಾಯಿತು).

ಶಿಗ್ಗಾಂವ.
ದಿಃ 19.01.2026

ಹಿರಿಯ ಸಿವಿಲ್ ನ್ಯಾಯಾಲಯ
ಹಾಗೂ ಜೆ ಎಂ ಎಫ್ ಸಿ., ಶಿಗ್ಗಾಂವ.